## ವಿಕೇರ್

ಮಹಿಳೆಯರಿಗೆ ಆತಂಕದ ಪರಿಸ್ಥಿತಿಯಲ್ಲಿ ರಕ್ಷಣೆಗೆ ನಿಲ್ಲುವ ಆ್ಯಪ್. ತನಗೆ ಒದಗಿದ ಸ್ಥಿತಿಯನ್ನು ಕುಟುಂಬ–ದವರಿಗೆ, ಸ್ನೇಹಿತರಿಗೆ ತಿಳಿಸಬಹುದು. ಈ ಆ್ಯಪ್‌ನಿಂದ ಮಹಿಳೆಯು ತಾನಿರುವ ಸ್ಥಳದ ಮಾಹಿತಿ, ಬ್ಯಾಟರಿಯ ಮಟ್ಟ ಮೊದಲಾದ ವಿವರಗಳನ್ನು ಮೊದಲೇ ರಚಿಸಿದ ಅಲರ್ಟ್ ಕಾಂಟ್ಯಾಕ್ಟ್ ಗ್ರೂಪ್‌ಗೆ ರವಾನಿಸಬಹುದು. ಜಿಪಿಎಸ್ ಸವಲತ್ತು ಕೂಡಾ ಇದ್ದು, ಸ್ಥಳದ ನಕ್ಷೆಯನ್ನು ಕಳಿಸಬಹುದು.







## ಗೂಗ್ಲ್ ಜಿಮೇಲ್ (ಆ್ಯಂಡ್ರಾಯ್ಡ್)

ಆ್ಯಂಡ್ರಾಯ್ಡ್‌ಗಾಗಿ ಜಿಮೇಲ್ ಆ್ಯಪ್ ಅನ್ನು ಸುಧಾರಣೆ ಮಾಡಲಾಗಿದ್ದು, ಇದು ವಿವಿಧ ರಂಗುಗಳಲ್ಲಿ ಕಾಣಿಸುತ್ತದೆ. ಈ ಮೊದಲು ಬಿಳಿ, ಕಪ್ಪು ಮತ್ತು ನೀಲಿ ವರ್ಣಗಳಲ್ಲಿ ಕಾಣಿಸಿಕೊಳ್ಳುತ್ತಿತ್ತು. ನಿಮ್ಮ ಸಂಪರ್ಕ ಸಂಖ್ಯೆಗಳು ಕೆಂಪು ಬಣ್ಣದಲ್ಲಿ ಕಾಣಿಸುತ್ತವೆ. ಸರಳವಾದ ಮೇಲ್ಮೈ ಹೊಂದಿದ್ದು, ಹುಡುಕಾಟವನ್ನು ಅತ್ಯಂತ ವೇಗವಾಗಿ ಮಾಡಬಹುದು. ಪಾಪ್ ಮೇಲ್ ಸೇರಿದಂತೆ ವಿವಿಧ ಖಾತೆಗಳನ್ನು ಬೆಂಬಲಿಸುತ್ತದೆ. ಮೇಲ್ ಸ್ವೈಪ್ ಮಾಡುವ ಆಯ್ಕೆಗೆ ಮಿತಿ ಹಾಕಲಾಗಿದೆ.

## ಕಾಲ್ ಬೆಂಗಳೂರು

ಬೆಂಗಳೂರು ನಗರಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿ ಪಡೆಯಲು ಈ ಆ್ಯಪ್ ಉಪಯುಕ್ತ. ಪ್ರವಾಸ, ಮನರಂಜನೆ, ತುರ್ತು ಸೇವೆ, ವಿಮಾನ, ಮೆಟ್ರೊ ಮೊದಲಾದವುಗಳ ಕುರಿತು ಮಾಹಿತಿ ಲಭ್ಯ. ಒಮ್ಮೆ ಈ ಆ್ಯಪ್ ಡೌನ್‌ಲೋಡ್ ಮಾಡಿದರೆ ಸಾಕು, ಅಂತರ್‌ಜಾಲದ ಸೇವೆಯಿಲ್ಲದೇ ನಂತರ ಮಾಹಿತಿ ಪಡೆಯಬಹುದು. ಒಟ್ಟು ಐದು ಸಾವಿರ ವಿಭಾಗಗಳಿದ್ದು, ಸುಮಾರು 4 ಲಕ್ಷ ಸಂಪರ್ಕ ಸಂಖ್ಯೆಗಳನ್ನು ಸೇರಿಸಲಾಗಿದೆ. ಕಾಲ್‌ಬಿಎಲ್‌ಆರ್.ಕಾಂ ವೆಬ್‌ಸೈಟ್‌ನಿಂದ ಇದನ್ನು ಡೌನ್‌ಲೋಡ್ ಮಾಡಬಹುದು.




## ಎವ್ರಿಝುರ್ವ್

ಬೆಂಗಳೂರಿನಲ್ಲಿ ಹೋಟೇಲ್‌ಗಳು, ಸಿನಿಮಾಗಳ ಕುರಿತು ವಿವರ ಪಡೆಯುವ ಆ್ಯಂಡ್ರಾಯ್ಡ್ ಹಾಗೂ ಸ್ಮಾರ್ಟ್‌ಫೋನ್ ಆ್ಯಪ್. ಹೋಟೇಲ್‌ಗಳಲ್ಲಿ ಲಭ್ಯವಿರುವ ತಿಂಡಿ– ತಿನಿಸು, ಅವುಗಳು ತೆರೆದಿರುವ ಸಮಯವನ್ನು ಈ ಆ್ಯಪ್ ಮೂಲಕ ತಿಳಿಯಬಹುದು. ಹಾಗೆಯೇ ಸಿನಿಮಾ ಥಿಯೇಟರ್‌ಗಳಲ್ಲಿ ಓಡುತ್ತಿರುವ ಸಿನಿಮಾಗಳು, ಸಮಯದ ವಿವರ, ಮುಂಗಡ ಬುಕಿಂಗ್ ಕೂಡಾ ಈ ಆ್ಯಪ್‌ನಿಂದ ಮಾಡಲು ಸಾಧ್ಯ. ಪ್ಲೇಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.



■ ಎಸ್. ತುಂಬೆ